156 ಸೆಟ್ಸ್ = 120

4RR

050126

# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಡಾ: ಧನಂಜಯ್ ಸರ್ಜಿ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:

**ಸೂಚನೆ:**

ರಕ್ತದಾನಿಗಳು ಕೊಟ್ಟ ರಕ್ತದಲ್ಲಿ ಪರೀಕ್ಷೆ ವೇಳೆ ಹೆಚ್.ಐ.ವಿ/ ಹೆಪಟೈಟಿಸ್, ಮಲೇರಿಯಾದಂತ ಗಂಭೀರ ಸೊಂಕುಗಳು ಪತ್ತೆಯಾಗಿದ್ದು, ರಾಜ್ಯದಲ್ಲಿನ ರಕ್ತ ನಿಧಿ ಕೇಂದ್ರಗಳಲ್ಲಿ ದಾನವಾಗಿ ಕೊಟ್ಟ ರಕ್ತವನ್ನು ಪರೀಕ್ಷಿಸುವ ಸಂದರ್ಭದಲ್ಲಿ ಸೋಂಕುಗಳು ಧೃಡವಾಗುತ್ತಿವೆ. ಪ್ರಸ್ತುತ ಕಾಲಘಟ್ಟದಲ್ಲಿ ರಕ್ತದ ಅಭಾವವಿರುವ ಈ ಸಂದರ್ಭದಲ್ಲಿ ವಾರ್ಷಿಕ ಸರಾಸರಿ 44,000 ಯೂನಿಟ್‌ಗೂ ಹೆಚ್ಚು ರಕ್ತ ವ್ಯರ್ಥವಾಗುತ್ತಿದ್ದು, ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯು ದಾನಿಗಳಿಂದ ರಕ್ತವನ್ನು ಪಡೆಯುವ ಪೂರ್ವದಲ್ಲಿಯೇ ಎಲ್ಲಾ ರೀತಿಯ ಪರೀಕ್ಷೆಗಳನ್ನು ಕೈಗೊಳ್ಳುವ ಮೂಲಕ ಕೈಗೊಳ್ಳಬಹುದಾದ ಕಟ್ಟುನಿಟ್ಟಿನ ಕ್ರಮಗಳ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

**ಹೇಳಿಕೆ:-**

ಕರ್ನಾಟಕ ರಾಜ್ಯ ರಕ್ತ ಚಾಲನಾ ಪರಿಷತ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಒಂದು ಅವಿಭಾಜ್ಯ ಅಂಗವಾಗಿದ್ದು. ಕರ್ನಾಟಕ ರಾಜ್ಯದಲ್ಲಿ ರಕ್ತ ಸುರಕ್ಷತೆ ಕಾರ್ಯಕ್ರಮವು ಸರ್ವೋಚ್ಚ ನ್ಯಾಯಾಲಯದ ತೀರ್ಮಾನ, ರಾಷ್ಟ್ರೀಯ ರಕ್ತ ಚಾಲನಾ ಪರಿಷತ್ ನಿಯಮಾವಳಿ ಹಾಗೂ ಔಷದ ನಿಯಂತ್ರಣ ಕಾಯ್ದೆ 1940, 122G ನಿಯಮಾವಳಿಯಂತೆ ಕಾರ್ಯನಿರ್ವಹಿಸುತ್ತಿದೆ.

ಸದರಿ ನಿಯಮಾವಳಿಯಂತೆ ದಾನಿಯ ರಕ್ತವನ್ನು ರಕ್ತ ಕೇಂದ್ರದಲ್ಲಿಯೇ ರೋಗ ಪತ್ತೆ ಹಚ್ಚುವ ಪ್ರಕ್ರಿಯೆ ELISA ಪರೀಕ್ಷೆಯ ಮುಖಾಂತರ ಮಾಡಲಾಗುತ್ತಿದೆ. ಹೆಚ್ಚುವರಿಯಾಗಿ ಇತರೇ ಪರೀಕ್ಷೆಗಳು NAT, CLIA, RAPIDಗಳನ್ನು ಮಾಡಲಾಗುತ್ತಿದೆ. ರೋಗ ಪತ್ತೆ ಹಚ್ಚುವ ಯಂತ್ರೋಪಕರಣವನ್ನು ಸುಮಾರು 18-20 Degree Celsius ರವರೆಗೆ ನಿಗದಿತ ತಾಪಮಾನವಿರುವ ಮುಚ್ಚಿದ ಕೊಠಡಿಯಲ್ಲಿ ಪರೀಕ್ಷೆ ಮಾಡಲಾಗುತ್ತಿದೆ.

ಒಂದು ವೇಳೆ ರಕ್ತ ಸಂಬಂಧಿ ರೋಗ ಕಂಡುಬಂದಲ್ಲಿ ಇನ್ನೊಮ್ಮೆ ಆಪ್ತ ಸಮಾಲೋಚನೆ ನಡೆಸಿ ರೋಗಾಣುವಿನ ನಿಖರ ಫಲಿತಾಂಶದ ದೃಢೀಕರಣಕ್ಕಾಗಿ ಮತ್ತೊಮ್ಮೆ ಹೆಚ್ಚಿನ ಪರೀಕ್ಷೆಗೆ ಒಳಪಡಿಸಲಾಗುವುದು. ತದನಂತರ ಸೋಂಕಿತ ದಾನಿಯನ್ನು ಸೂಕ್ತ ವೈದ್ಯಕೀಯ ಚಿಕಿತ್ಸೆಗಾಗಿ ಸಂಬಂಧಿಸಿದ ವಿಭಾಗಕ್ಕೆ ಸೂಚಿಸಲಾಗುವುದು.

ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ರಾಷ್ಟ್ರೀಯ ರಕ್ತ ಚಾಲನಾ ಪರಿಷತ್‌ನ ನಿಯಮಾವಳಿಯಂತೆ ಒಟ್ಟು ರಕ್ತ ಸಂಗ್ರಹಣೆಯ ಗರಿಷ್ಠ ಶೇಕಡ 5% ರಷ್ಟು ರಕ್ತವನ್ನು ತ್ಯಾಜ್ಯ ಮಾಡಲು ನಿಗದಿಪಡಿಸಲಾಗಿದೆ. ಅದರಂತೆ ವಿಶ್ವ ಆರೋಗ್ಯ ಸಂಸ್ಥೆಯ ಜಾಗತಿಕ ಮಟ್ಟದ ಸಮೀಕ್ಷೆಯ ಪ್ರಕಾರ ಗರಿಷ್ಠ ಶೇಕಡ 2% ರಿಂದ 3% ರಕ್ತ ಸಂಬಂಧಿ ಸೋಂಕುಗಳು ಕಂಡುಬರಬಹುದು ಎಂದು ಅಂದಾಜಿಸಲಾಗಿದೆ. ರಾಜ್ಯದ ಕಳೆದ 3 ಆರ್ಥಿಕ ಸಾಲಿನಲ್ಲಿ ತ್ಯಾಜ್ಯ ರಕ್ತ ಮತ್ತು ಹೆಚ್.ಐ.ವಿ/ಹೆಪಟೈಟೀಸ್, ಮಲೇರಿಯಾ ಸೋಂಕುಗಳ ವಿವರ ಈ ಕೆಳಕಂಡಂತಿದೆ.

Statement showing last 3 years discard & Transfusion Transmitted Infection Reactive rate of Blood units in Karnataka





Generated from eOffice by Ambika Devanand Hanasahetty, HFW-HEALT2-ASST(AD), ASSISTANT, HEALTH AND FAMILY WELFARE SEC on 02/12/2025 1

| Year | No of Blood Units Collection | Discard | % of Discard | Sero Reactive (HIV, HBC,HCV,VDRL, MP) | | Reason of Discard |
|---|---|---|---|---|---|---|
| | | | | Detected | % of TTI | |
| 2024-25 | 1011073 | 42919 | 4.24 | 8,989 | 0.89 | Sero Reactive, out dated & any other reason |
| 2023-24 | 974689 | 37906 | 3.89 | 7,698 | 0.79 | |
| 2022-23 | 975785 | 43857 | 4.49 | 8,240 | 0.84 | |

ಈ ಮೇಲಿನ ಅಂಕಿ ಅಂಶಗಳಿಂದ ವಿಶ್ವಸಂಸ್ಥೆ ಹಾಗೂ ರಾಷ್ಟ್ರೀಯ ರಕ್ತ ಚಾಲನಾ ಪರಿಷತ್‌ನ ನಿಯಮಾವಳಿಯಂತೆ ಕರ್ನಾಟಕ ರಾಜ್ಯವು ನಿಗದಿತ ಸರಾಸರಿಗಿಂತ ಕಡಿಮೆ ಅಂಕಿ ಅಂಶವನ್ನು ಹೊಂದಿರುತ್ತದೆ ಮತ್ತು ರಕ್ತ ತ್ಯಾಜ್ಯವು (Discard of Blood) ನಿಗದಿತ ಶೇಕಡವಾರಿಗಿಂತ ಕಡಿಮೆ ತ್ಯಾಜ್ಯಗೊಳ್ಳುತ್ತಿದೆ.

ರಕ್ತ ತ್ಯಾಜ್ಯ ಮತ್ತು ಸೋಂಕಿತ ರಕ್ತದಾನ ಮಾಡುವುದನ್ನು ತಡೆಗಟ್ಟಲು IEC ಕಾರ್ಯಕ್ರಮಗಳ ಮುಖಾಂತರ ರಕ್ತ ಕೇಂದ್ರಗಳಿಗೆ ಹಾಗೂ ದಾನಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗಿದೆ.

ರಕ್ತದಾನ ಮಾಡಲು ಬಂದಂತಹ ದಾನಿಗೆ ಮೊದಲೇ ಸೋಂಕು ಹರಡುವ ಸಾಧ್ಯತೆಗಳ ಬಗ್ಗೆಅರಿವು ಮೂಡಿಸುವುದು. ಇದರಿಂದ ದಾನಿಯು ತಾನು ರಕ್ತ ಕೊಡಬಹುದೇ ಅಥವಾ ಬೇಡವೇ ಎಂಬ ದೃಢ ನಿರ್ಧಾರಕ್ಕೆ ಬರುವಂತೆ ಆಪ್ತ ಸಮಾಲೋಚನೆ ನಡೆಸುವುದು ಮತ್ತು ಎಲ್ಲಾ ರಕ್ತ ಕೇಂದ್ರಗಳಿಗೂ ಬೇಡಿಕೆಗನುಗುಣವಾಗಿ ಅವಶ್ಯವಿರುವ ರಕ್ತವನ್ನು ಮಾತ್ರವೇ ಪಡೆಯಲು ಹಾಗೂ ಸಂಗ್ರಹಿಸಲು ಸೂಚಿಸಿದೆ. ಹೆಚ್ಚುವರಿ ರಕ್ತವನ್ನು ಅಗತ್ಯ ರಕ್ತ ಕೇಂದ್ರಗಳು/ಆಸ್ಪತ್ರೆಗಳಿಗೆ ರವಾನಿಸಲು ಸೂಚಿಸಿದೆ.

**ಕಡತ ಸಂಖ್ಯೆ:** ಆಕುಕ 124 ಎಸ್‌ಬಿವಿ 2025.

(ದಿನೇಶ್ ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು



File No. HFW/124/SBV/2025-HEALTH 2-HEALTH AND FAMILY WELFARE SEC (Computer No. 1881887)
Generated from eOffice by Ambika Dayanand Honnashetty, HFW-HEALT2-ASST(AD), ASSISTANT, HEALTH AND FAMILY WELFARE SEC on 03/12/2025 1